ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ದೇವದುರ್ಗ.

**CC No.700/2024**

**PW-1 CW-1**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಚನ್ನಬಸವ ರೆಡ್ಡಿ |
| ತಂದೆ | ಃ | ಪರ್ವತ ರೆಡ್ಡಿ |
| ವಯಸ್ಸು | ಃ | 45 |
| ಉದ್ಯೋಗ | ಃ | ಖಾಸಗಿ ಕೆಲಸ |
| ಸ್ಥಳ | ಃ | ಗಾಗಲ್ |
| ಪ್ರಮಾಣಿಕರಿಸಿದ ದಿನಾಂಕ | ಃ | **11.12.2025** |

---

ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.

ಚಾಸಾ -2 ರಿಂದ 4 ರವರ ಪರಿಚಯ ಇರುತ್ತದೆ. ಆರೋಪಿತರು ನನಗೆ ಅಣ್ಣ ಮತ್ತು ಅಣ್ಣನ ಹೆಂಡತಿಯಾಗಬೇಕು. ಆರೋಪಿತರು ನನಗೆ ಅಣ್ಣ ಮತ್ತು ಅತ್ತಿಗೆ ಆಗಬೇಕು. ಗಾಗಲ್ ಗ್ರಾಮದ ಸ.ನಂ.35 ರಲ್ಲಿ 01 ಎಕರೆ 10 ಗುಂಟೆ ನನ್ನ ಹೆಸರಿನಲ್ಲಿ ಇದ್ದು ಸದರಿ ಜಮೀನನ್ನು 2017 ರಿಂದ 2023 ರ ವರೆಗೆ ಆರೋಪಿತರಿಗೆ ಜಮೀನನ್ನು ಲೀಜಿಗೆ ನೀಡಿದ್ದು ಇರುತ್ತದೆ. ದಿನಾಂಕ:18-06-2024 ರಂದು ಮಧ್ಯಾಹ್ನ 12:30 ರ ಸುಮಾರಿಗೆ ಜಮೀನಿನ ಲೀಜಿನ ಹಣವನ್ನು ನೀಡಿರುವುದಿಲ್ಲ ಹಾಗೂ ಆರೋಪಿತರು ನನ್ನ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದು ಅದನ್ನು ನಾನು ಪ್ರಶ್ನಿಸಿದ್ದಕ್ಕೆ 1 ನೇ ಆರೋಪಿ ನನ್ನ ಅಣ್ಣ ನಿನಗೆ ನಾನು ಜಮೀನು ಬಿಟ್ಟು ಕೊಡುವುದಿಲ್ಲ ಎಂದು ಅವಾಚ್ಯವಾಗಿ ನನಗೆ ಬೈದಿರುತ್ತಾನೆ ನಂತರ 2 ನೇ ಆರೋಪಿ ನನಗೆ ಕಟ್ಟಿಗೆಯಿಂದ ಬೆನ್ನಿಗೆ ಹೊಡೆದಿದ್ದು ಆಗ ನಾನು ಕೆಳಗೆ ಬಿದ್ದಾಗ 1 ನೇ ಆರೋಪಿ ಕಲ್ಲನ್ನು ತೆಗೆದುಕೊಂಡು ನನ್ನ ಎದೆಗೆ ಹೊಡೆದಿದ್ದು. ಕಟ್ಟಿಗೆಯಿಂದ ತಲೆಗೆ ಹೊಡೆದು ಮೂಕ ಪೆಟ್ಟು ಮಾಡಿರುತ್ತಾನೆ. ಈ ಜಮೀನಿಗೆ ಬಂದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಆರೋಪಿತರು ಜೀವದ ಬೇದರಿಕೆ ಹಾಕಿರುತ್ತಾರೆ. ನಂತರ ಚಾಸಾ-4 ಹನುಮಂತ್ರಾಯ ಬಂದು ಜಗಳ ಬಿಡಿಸಿರುತ್ತಾನೆ. ಠಾಣೆಗೆ ಹೋಗಿ ಅಲ್ಲಿಂದ ರೀಮ್ಸ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. 10-07-2024 ರಂದು ಠಾಣೆಗೆ ಬಂದು ದೂರನ್ನು ನೀಡಿರುತ್ತೇನೆ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು, ದಿನಾಂಕ:11-07-2024 ರಂದು ಬೆಳಿಗ್ಗೆ 10:00 ರಿಂದ 11:00 ಗಂಟೆ ಸಮಯದಲ್ಲಿ ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿ ಒಂದು ಕಲ್ಲು ಮತ್ತು ಕಟ್ಟಿಗೆಯನ್ನು ಅಮಾನತ್ತು ಪಡಿಸಿಕೊಂಡು ಸ್ಥಳದಲ್ಲಿ ಪೋಟೋವನ್ನು ತೆಗೆದಿದ್ದು ಪೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಕಟ್ಟಿಗೆ ಮತ್ತು ಕಲ್ಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು

ಕ್ರಮವಾಗಿ ಮು.ಮಾ 1 ಮತ್ತು 2 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಹೆಚ್.ಕೆ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೇಳಿದ್ದು ಸಕಾರಣಗಳು ಇಲ್ಲ ದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.